ಪಿ.ಡಬ್ಲೂಃ 1

<u>ದಿನಾಂಕಃ **30.05.2023** ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಮತ್ತು ಪ್ರಮಾಣ ವಚನ ಭೋದಿಸಲಾಯಿತು</u>

<u>ಪಾಟೀ ಸವಾಲು:- ಪ್ರತಿವಾದಿಯ ಪರವಾಗಿ Sri. VRP, ವಕೀಲರಿಂದ</u>

1. ಲಕ್ಷ್ಮೇಶ್ವರದಲ್ಲಿ ನನ್ನದು ಪೈನಾನ್ಸ ಇರುತ್ತದೆ ಎಂದರೆ ಸರಿ. ನಾನು ಪೈನಾನ್ಸದಲ್ಲಿ ಹಣಕಾಸಿನ ಅಡಚಣೆ ಇದ್ದವರಿಗೆ ಬಡ್ಡಿಯ ರೂಪದಲ್ಲಿ ಹಣವನ್ನು ಕೊಡುತ್ತೇನೆ ಎಂದರೆ ಸರಿ. ನಾನು ಲಕ್ಷ್ಮೇಶ್ವರ ಸವಣೂರ ರಸ್ತೆಯ ಕಡೆಗೆ ಒಂದು ಜಮೀನುವನ್ನು ಖರೀದಿ ಮಾಡಿ ಅದನ್ನು ಬಿನಶೇತ್ಕಿ ಮಾಡಿ ಪ್ಲಾಟುಗಳನ್ನು ತಯಾರಿಸಿ ಮಾರಾಟ ಮಾಡುತ್ತಿದ್ದೇನೆ ಎಂದರೆ ಸರಿ. ನಾನು ಸದರಿ ಪ್ಲಾಟುಗಳನ್ನು ಮಾರಾಟ ಮಾಡುತ್ತಿದ್ದರಿಂದ ಬೇರೆ ಪ್ಲಾಟುಗಳನ್ನು ಖರೀದಿಸುವ ಪ್ರಸಂಗ ಬರುವುದಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ನಾನು ಪ್ಲಾಟುಗಳನ್ನು ಮಾರುತ್ತೇನೆ ಮತ್ತು ಖರೀದಿಸುತ್ತೇನೆ ಅಂತಾ ನುಡಿಯುತ್ತಾರೆ.

2. ಪ್ರತಿವಾದಿಯು ತನ್ನ ವ್ಯಾಪಾರಕ್ಕಾಗಿ ನನ್ನ ಬಳಿ ಹಣವನ್ನು ಕೇಳಿದ್ದನು ಎಂದರೆ ಸರಿಯಲ್ಲ. ಸದರಿ ಹಣದ ಭದ್ರತೆಗಾಗಿ ಯಾವುದಾದರೂ ದಾಖಲೆಯನ್ನು ಬರೆದು ಕೊಡುವಂತೆ ಕೇಳಿದಾಗ ಪ್ರತಿವಾದಿಯು ದಾವಾ ಆಸ್ತಿಯನ್ನು ಭದ್ರತೆಗಾಗಿ ಬರೆದು ಕೊಟ್ಟಿರುತ್ತಾನೆ ಎಂದರೆ ಸರಿಯಲ್ಲ. ಪ್ರತಿವಾದಿಯು ರೂ.1,70,000/- ಸಾಲದ ಭದ್ರತೆಗಾಗಿ ದಾವಾ ಆಸ್ತಿಯ ಕಾಗದ ಪತ್ರಗಳನ್ನು ನನ್ನ ಬಳಿ ತಂದು ಕೊಟ್ಟರು ಎಂದರೆ ಸರಿಯಲ್ಲ ಪ್ರತಿವಾದಿಯು ಯಾವುದೇ ಖರೀದಿ ಕರಾರು ಪತ್ರ ಬರೆದುಕೊಟ್ಟಿಲ್ಲ ಕೇವಲ ಭದ್ರತೆಗಾಗಿ ಬರೆದುಕೊಟ್ಟಿರುತ್ತಾನೆ ಎಂದರೆ ಸರಿಯಲ್ಲ.

3. ಪ್ರತಿವಾದಿಯು 2020 ರವರೆಗೆ ಬಡ್ಡಿಯ ಹಣವನ್ನು ಮರು ಪಾವತಿ ಮಾಡುತ್ತಾ ಬಂದಿರುತ್ತಾನೆ ಎಂದರೆ ಸರಿಯಲ್ಲ. ಪ್ರತಿವಾದಿಯು ತನ್ನ ವ್ಯಾಪಾರದಲ್ಲಿ ಲುಕ್ಸಾನು ಹೊಂದಿದ್ದರಿಂದ ನನಗೆ ಬಡ್ಡಿಯ ಹಣವನ್ನು ಕೊಡಲು ವಿಫಲವಾಗಿರುತ್ತಾನೆ ಎಂದರೆ ಸರಿಯಲ್ಲ. ಪ್ರತಿವಾದಿಯು ನನ್ನ ಜೊತೆಗೆ ಯಾವುದೇ ಕಾಲಕ್ಕೆ ಖರೀದಿ ಕರಾರು ಪತ್ರ ವ್ಯವಹಾರ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯು ಖರೀದಿ ಕರಾರು ಪತ್ರವನ್ನು ನೋಂದ ಮಾಡಿ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ

4. ದಾವಾ ಆಸ್ತಿಯನ್ನು ನಾನು ನೋಡಿರುತ್ತೇನೆ. ದಾವಾ ಆಸ್ತಿಯ ಚೆಕಬಂದಿ ಹೇಳಲು ಬರುತ್ತದೆ. ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಪ್ಲಾಟ ನಂ.14, ದಕ್ಷಿಣಕ್ಕೆ ಪ್ಲಾಟ ನಂ.29, ಉತ್ತರಕ್ಕೆ ಪ್ಲಾಟ ನಂ.28 ಇರುತ್ತದೆ. ಸದರಿ ದಾವಾ ಆಸ್ತಿಯ ಸರ್ವೇ ನಂ.36 ಡಿ/2 ಅಂತಾ ಇರುತ್ತದೆ ಅಂತಾ ನುಡಿಯುತ್ತಾರೆ. ಹುಬ್ಬಳ್ಳಿ ರಸ್ತೆಗೆ ಹೊಂದಿಕೊಂಡು ಇರುವ ನಿವೇಶನಗಳ ಬೆಲೆ 12 ರಿಂದ 13 ಲಕ್ಷ ಇರುತ್ತವೆ ಎಂದರೆ ಸರಿಯಲ್ಲ. 2013 ರಲ್ಲಿ ದಾವಾ ಆಸ್ತಿಯ ಕಿಮ್ಮತ್ತು 6 ಲಕ್ಷ ಆಗುತ್ತಿತ್ತು ಎಂದರೆ ಸರಿಯಲ್ಲ. ದಾವಾ ಆಸ್ತಿಯು ಮಾತ್ರ ಪ್ರತಿವಾದಿಗೆ ಇರುವುದರಿಂದ ಆ ಆಸ್ತಿಯು ಆತನಿಗೆ ಬಹಳ ಅವಶ್ಯ ಇರುತ್ತದೆ ಎಂದರೆ ನನಗೆ ಗೋತ್ತಿಲ್ಲ. ಪ್ರತಿವಾದಿಯು ತಾನು ತೆಗೆದುಕೊಂಡ ಸಾಲವನ್ನು ಮರು ಪಾವತಿಸಲು ತಯಾರು ಇರುತ್ತಾನೆ ಎಂದರೆ ಸಾಕ್ಷಿಯು ನಾನು ಯಾವುದೇ ಸಾಲ ಕೊಟ್ಟಿಲ್ಲ ಅಂತಾ ನುಡಿಯುತ್ತಾರೆ.

<u>ಈ ಹಂತದಲ್ಲಿ ವಕೀಲರು ಮುಂದುವರೆದ ಪಾಟೀ ಸವಾಲಿಗಾಗಿ ಸಮಯ ಕೋರಿದ್ದರಿಂದ ಸಮಯ ನೀಡಿ ಪಾಟೀ ಸವಾಲನ್ನು ಮುಂದೂಡಲಾಯಿತು.</u>

*(ನನ್ನ ಉಖ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)*

ಓದಿ ಹೇ ಕೇ ಸರಿ ಅದೆ.

ದಿವಾಣಿ ನ್ಯಾಯಾಧೀಶರು, ಲಕ್ಷ್ಮೇಶ್ವರ.

ಪಿ.ಡಬ್ಲೂಃ 1

<u>ದಿನಾಂಕಃ **26.06.2023** ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಮತ್ತು ಪ್ರಮಾಣ ವಚನ ಭೋದಿಸಲಾಯಿತು</u>

<u>ಮುಂದುವರೆದ ಪಾಟೀ ಸವಾಲು:- ಪ್ರತಿವಾದಿಯ ಪರವಾಗಿ Sri. VRP, ವಕೀಲರಿಂದ</u>

5. ನಾನು ಪಾಲುದಾರಿಕೆ ಸಂಸ್ಥೆಯನ್ನು ನೊಂದಣಿ ಮಾಡಿಸಿರುತ್ತೇನೆ. ಸದರಿ ಪಾಲುದಾರಿಕೆ ಸಂಸ್ಥೆಯಲ್ಲಿ ಒಟ್ಟು 5 ಜನ ಸದಸ್ಯರು ಇರುತ್ತೇವೆ. ನಾನು ಈ ದಾವೆಯಲ್ಲಿ 5 ಜನ ಸದಸ್ಯರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ, ಸಾಕ್ಷಿ ಮುಂದುವರೆದು ಅವರು ನನಗೆ GPA ಬರೆದುಕೊಟ್ಟಿರುತ್ತಾರೆ ಅಂತಾ ನುಡಿಯುತ್ತಾರೆ. ಆ GPA ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ, ಸಾಕ್ಷಿ ಮುಂದುವರೆದು ಹಾಜರುಪಡಿಸುತ್ತೇನೆ ಅಂತಾ ನುಡಿಯುತ್ತಾರೆ.

6. ಸದರಿ ಪಾಲುದಾರಿಕೆ ಸಂಸ್ಥೆಯನ್ನು ಶೇತ್ಕಿ ಜಮೀನವನ್ನು ಖರೀದಿ ಹಿಡಿದು ಬಿನಶೇತ್ಕಿ ಜಮೀನು ಮಾಡಿ ಪ್ಲಾಟುಗಳನ್ನು ಮಾರಾಟ ಮಾಡುವುದು ಮತ್ತು ಬಿನಶೇತ್ಕಿ ಪ್ಲಾಟುಗಳನ್ನು ಖರೀದಿಸಿ ಬೇರೆಯವರಿಗೆ ಮಾರಾಟ ಮಾಡುವ ಉದ್ದೇಶದಿಂದ ಮಾಡಿರುತ್ತೇವೆ. ಸದರಿ ಪಾಲುದಾರಿಕೆ ಸಂಸ್ಥೆಯಲ್ಲಿ ಲೆಕ್ಕ ಪತ್ರ ಇಟ್ಟಿರುತ್ತೇವೆ ಈ ದಾವೆಯಲ್ಲಿ ವಚನಪತ್ರಕ್ಕೆ ಸಂಬಂಧಿಸಿದ ವಚನಪತ್ರದ ಬಗ್ಗೆ ಲೆಕ್ಕ ಪತ್ರದಲ್ಲಿ ನಮೂದು ಇರುತ್ತದೆ ಆ ಲೆಕ್ಕ ಪತ್ರವನ್ನು ಈ ದಾವೆಯಲ್ಲಿ ಹಾಜರುಪಡಿಸಿರುವುದಿಲ್ಲ ಸಾಕ್ಷಿ ಮುಂದುವರೆದು ಮುಂದೆ ಹಾಜರುಪಡಿಸಿರುತ್ತೇನೆ ಅಂತಾ ನುಡಿಯುತ್ತಾರೆ.

7. ನಾನು ಪ್ರತಿವಾದಿಯನ್ನು ಯಾವತ್ತಿಗೂ ಭೇಟಿಯಾಗಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ಸಾಕ್ಷಿ ಪ್ರಮಾಣಪತ್ರದಲ್ಲಿ ಬರೆದ ಎಲ್ಲ ವಿಷಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ ಪ್ರತಿವಾದಿಯ ಆಸ್ತಿಯನ್ನು ಪಡೆದುಕೊಳ್ಳುವ ಉದ್ದೇಶದಿಂದ ಸುಳ್ಳು ದಾವೆ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲಃ</u>

*(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)*

ಓದಿ ಹೇ ಕೇ ಸರಿ ಅದೆ.

ದಿವಾಣಿ ನ್ಯಾಯಾಧೀಶರು, ಲಕ್ಷ್ಮೇಶ್ವರ.